**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.**

## ಸಂಘದ ಅಭ್ಯುದಯದತ್ತ ನೂತನ ಪದಾಧಿಕಾರಿಗಳ ಪಯಣ...

### ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳು ಅಧ್ಯಕ್ಷರ ಸಾರಥ್ಯದಲ್ಲಿ ಸಂಘದ ಅಭಿವೃದ್ಧಿ ಕಾರ್ಯ ಚಟುವಟಿಕೆಗಳಡಿಯಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಆರೋಗ್ಯ ಯೋಜನೆ ಸೇರಿದಂತೆ ಇನ್ನಿತರ ಕುಂದು – ಕೊರತೆಗಳ ನಿವಾರಣೆಗಾಗಿ ತಮ್ಮ ಪ್ರಯತ್ನವನ್ನು ಮುಂದುವರಿಸಿತು...





ಮೊಟ್ಟಮೊದಲಿಗೆ ನಮ್ಮ ಸಂಘದ ಕಟ್ಟಡದ ಆಶ್ರಯದಾತರಾದ ಬೆಂಗಳೂರು ನಗರದ ಪೊಲೀಸ್ ಆಯುಕ್ತರಾದ ಶ್ರೀ ಬಿ. ದಯಾನಂದ ಐಪಿಎಸ್ ರವರನ್ನು ಭೇಟಿ ಮಾಡಿ ಪ್ರಸ್ತುತ ಕಟ್ಟಡದ ಉನ್ನತೀಕರಣ ಹಾಗೂ ವಿಸ್ತರಣೆಗಾಗಿ ಅನುಮತಿ ಕೋರಿ ಮನವಿ ಸಲ್ಲಿಸಲಾಯಿತು.

ತದನಂತರ ಬೆಂಗಳೂರು ನಗರದ ಪೊಲೀಸ್ ಆಯುಕ್ತರವರ ಕಛೇರಿಯಲ್ಲಿರುವ ಆಡಳಿತ ವಿಭಾಗದ ಉಪ-ಪೊಲೀಸ್ ಆಯುಕ್ತರವರಾದ ಶ್ರೀ ಸಂತೋಷ್ ಬಾಬು ಐಪಿಎಸ್ ರವರನ್ನು ಭೇಟಿ ಮಾಡಿ ನಮ್ಮ ಮನವಿಯನ್ನು ಪುರಸ್ಕರಿಸಿ ಕೂಡಲೇ ಸ್ಪಂದಿಸಲು ವಿನಂತಿಸಲಾಯಿತು.







ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಆರೋಗ್ಯ ಯೋಜನೆಯಡಿಯಲ್ಲಿ ಪಡೆಯುತ್ತಿರುವ ಚಿಕಿತ್ಸೆಗೆ ಹಣದ ಕೊರತೆಯನ್ನು ನೀಗಿಸಿ ಚಿಕಿತ್ಸಾ ವೆಚ್ಚದ ಹಣವನ್ನು ಹೆಚ್ಚಿಸಲು ಮುಂಬರುವ ಬಜೆಟ್ ನಲ್ಲಿ ಹೆಚ್ಚುವರಿ 50 ಕೋಟಿ ಹಣವನ್ನು ಕಾಯಿದ್ದಿರಿಸಲು ಅನುಕೂಲವಾಗುವಂತೆ ಒಳಾಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಎಸ್. ಆರ್. ಉಮಾಶಂಕರ್ ಐಎಎಸ್ ರವರನ್ನು ವಿಧಾನ ಸೌಧದ ಕಛೇರಿಯಲ್ಲಿ ಭೇಟಿ ಮಾಡಿ ಕೂಲಂಕಷವಾಗಿ ವಿವರಿಸಲಾಯಿತು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಆರೋಗ್ಯ ಯೋಜನೆಯಡಿಯಲ್ಲಿ ಪಡೆಯುತ್ತಿರುವ ಚಿಕಿತ್ಸೆಗೆ ಹಣದ ಕೊರತೆಯನ್ನು ನೀಗಿಸಿ ಚಿಕಿತ್ಸಾ ವೆಚ್ಚದ ಹಣವನ್ನು ಹೆಚ್ಚಿಸಲು ಮುಂಬರುವ ಬಜೆಟ್ ನಲ್ಲಿ ಹೆಚ್ಚುವರಿ 50 ಕೋಟಿ ಹಣವನ್ನು ಕಾಯಿದ್ದಿರಿಸಲು ಅನುಕೂಲವಾಗುವಂತೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ರಜನೀಶ್ ಗೋಯಲ್ ಐಎಎಸ್ ರವರನ್ನು ಭೇಟಿ ಮಾಡಿ ಕೂಲಂಕಷವಾಗಿ ವಿವರಿಸಲಾಯಿತು.







ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಆರೋಗ್ಯ ಯೋಜನೆಯಡಿಯಲ್ಲಿ ಪಡೆಯುತ್ತಿರುವ ಚಿಕಿತ್ಸೆಗೆ ಹಣದ ಕೊರತೆಯನ್ನು ನೀಗಿಸಿ ಚಿಕಿತ್ಸಾ ವೆಚ್ಚದ ಹಣವನ್ನು ಹೆಚ್ಚಿಸಲು ಮುಂಬರುವ ಬಜೆಟ್ ನಲ್ಲಿ ಹೆಚ್ಚುವರಿ 50 ಕೋಟಿ ಹಣವನ್ನು ಕಾಯಿದ್ದಿರಿಸಲು ಹಾಗೂ ಸಂಘದ ಕಟ್ಟಡದ ತೆರಿಗೆಯನ್ನು ಮನ್ನಾ ಮಾಡುವಂತೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯ ನವರನ್ನು ಗೃಹ ಕಛೇರಿ ಕೃಷ್ಣಾ ದಲ್ಲಿ ಭೇಟಿ ಮಾಡಿ ಕೂಲಂಕಷವಾಗಿ ವಿವರಿಸಲಾಯಿತು.





ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಆರೋಗ್ಯ ಯೋಜನೆಯಡಿಯಲ್ಲಿ ಪಡೆಯುತ್ತಿರುವ ಚಿಕಿತ್ಸೆಗೆ ಹಣದ ಕೊರತೆಯನ್ನು ನೀಗಿಸಿ ಚಿಕಿತ್ಸಾ ವೆಚ್ಚದ ಹಣವನ್ನು ಹೆಚ್ಚಿಸಲು ಮುಂಬರುವ ಬಜೆಟ್ ನಲ್ಲಿ ಹೆಚ್ಚುವರಿ 50 ಕೋಟಿ ಹಣವನ್ನು ಕಾಯಿದ್ದಿರಿಸಲು ಸೇರಿದಂತೆ ನಿವೃತ್ತ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಮೃತರಾದಾಗ ಶವ – ಸಂಸ್ಕಾರಕ್ಕಾಗಿ ಕಲ್ಯಾಣ ನಿಧಿಯಿಂದ ನೀಡುವ 10,000 ರೂ.ಗಳನ್ನು ಅದೇ ದಿನ ಫಲಾನುಭವಿಗಳಿಗೆ ಪಾವತಿಸುವಂತೆಯೂ,



ಮಂಡ್ಯ ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ನಿವೇಶನ ಹಂಚಿಕೆಯಲ್ಲಿ ವಂಚನೆ/ಮೋಸಗಾರಿಕೆಗೆ ಬಲಿಯಾಗಿರುವ ನೊಂದ, ನಿರಾಶ್ರಿತ, ಅಸಹಾಯಕ, ನಿವೃತ್ತ ಪೊಲೀಸ್ ಅಧಿಕಾರಿಗಳಿಗೆ ಆಸರೆಯಾಗುವ ಮೂಲಕ ಸಾಮಾಜಿಕ ನ್ಯಾಯ ಒದಗಿಸುವಂತೆಯೂ,



ರಾಜ್ಯಾದ್ಯಂತ ಇರುವ, ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಜಿಲ್ಲಾ ಪೊಲೀಸ್ ಘಟಕಗಳಿಂದ ಪೊಲೀಸ್ ಇಲಾಖೆಯ ಜಾಗವನ್ನು ಒದಗಿಸಲು ಎಲ್ಲ ಪೊಲೀಸ್ ಘಟಕಾಧಿಕಾರಿಗಳಿಗೆ ಲಭ್ಯವಿರುವ ಪೊಲೀಸ್ ಇಲಾಖಾ ಜಮೀನಿನಲ್ಲಿ ಸಂಘ ನಿರ್ವಹಿಸಲು ಸೂಕ್ತ ಸ್ಥಳಾವಕಾಶ ಮಾಡಿಕೊಡಬೇಕೆಂದು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದೂ ಕರ್ನಾಟಕ ರಾಜ್ಯದ ಡಿ.ಜಿ. ಮತ್ತು ಐ.ಜಿ.ಪಿ.ಯವರಾದ ಡಾ|| ಅಲೋಕ್ ಮೋಹನ್ ಐಪಿಎಸ್ ರವರನ್ನು ಪೊಲೀಸ್ ಪ್ರಧಾನ ಕಛೇರಿಯಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಭಿವೃದ್ಧಿ ಅಭಿಯಾನ ಮುಂದುವರಿಯುತ್ತದೆ...

NAMASTE

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

* * * * *